# ಮಿಲೇ ಸುರ್ ಮೇರಾ ತುಮ್ಹಾರಾ

ಅಲೆ ಅಲೆಯಾಗಿ ಹೊಮ್ಮುವ ದೇಶಭಕ್ತಿ ಗೀತೆಗಳನ್ನು ಕೇಳಿ ರೋಮಾಂಚನಗೊಳ್ಳದವರಾರು? ಬಾಲ್ಯದ ಆ ಸುಂದರ ಬಿಂಬಗಳು ಈಗಲೂ ಮೈಮನಗಳಲ್ಲಿ ಹೆಮ್ಮೆ–ಅಭಿಮಾನ–ಉತ್ಸಾಹದ ಅಲೆಗಳನ್ನು ಉಕ್ಕಿಸುವಷ್ಟು ಜೀವಂತ.

■ **ಸುಮಾವೀಣಾ**

ಒಂದು ಕಾಲವಿತ್ತು. ಅರ್ಥವಾದರೂ ಸರಿ, ಅರ್ಥವಾಗದೆ ಇದ್ದರೂ ಸರಿ, ಕಣ್ಣು ಮಿಟುಕಿಸದೆ ಮೈ ಅಲುಗಿಸದೆ ಟೀವಿ ಮುಂದೆ ಕೂರುತ್ತಿದ್ದ ಕಾಲ. ದೂರದರ್ಶನದ ಏಕಚಕ್ರಾಧಿಪತ್ಯದ ಕಾಲ. ಭಾನುವಾರ ಪ್ರಾದೇಶಿಕ ಭಾಷೆಯ ಚಲನಚಿತ್ರಗಳು ಪ್ರಸಾರವಾಗುತ್ತಿದ್ದವು. ಮಧ್ಯಾಹ್ನ ವಾರ್ತಾ ಪ್ರಸಾರದ ನಂತರ 'ಕನ್ನಡ ಫೀಚರ್ ಫಿಲ್ಮ್' ಎಂದುಬಿಟ್ಟರಂತೂ ಕುಣಿದಾಡುತ್ತಿದ್ದೆವು. ಹಿಂದಿಯವರ ಬಾಯಲ್ಲಿ ಕನ್ನಡ ಕೇಳಿಸಿಕೊಳ್ಳುವುದು ಆಪ್ಯಾಯಮಾನವಾಗಿತ್ತು.

ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ದಿನಗಳಲ್ಲಿ ನೇರ ಪ್ರಸಾರವಾಗುವ ಧ್ವಜಾರೋಹಣ ಕಾರ್ಯಕ್ರಮಗಳನ್ನು ನೋಡುವುದಂತೂ ಬಹಳ ಖುಷಿ. ಅದರಲ್ಲೂ ಗಣರಾಜ್ಯೋತ್ಸವ ಸಂದರ್ಭದಲ್ಲಿ ನಮ್ಮ ರಾಜ್ಯದ ಟ್ಯಾಬ್ಲೊ ನೋಡುವುದೆಂದರೆ ಇನ್ನೂ ಖುಷಿ. ನಮ್ಮ ಜಿಲ್ಲೆಯ ಥೀಮ್ ಇದ್ದರಂತೂ ಸಂಭ್ರಮಕ್ಕೆ ಪಾರವೇ ಇಲ್ಲ, ಬಿಟ್ಟ ಕಣ್ಣು ಬಿಟ್ಟ ಹಾಗೆ ನೋಡುತ್ತಿದ್ದೆವು. ಬಹಳ ಹೆಮ್ಮೆ ಅನ್ನಿಸುತ್ತಿದ್ದ, ಇಂದಿಗೂ ನೋಡಲು ಕಾತರಿಸುವ ಕಾರ್ಯಕ್ರಮವದು. 'ಬೀಟಿಂಗ್ ದಿ ರಿಟ್ರೀಟ್' ಸೇನೆಯ ಆ ಸಂಗೀತ, ಗೌರವ ಸ್ವೀಕಾರದ ಆ ವೈಭವವನ್ನು ನೋಡಿಯೇ ತಣಿಯಬೇಕು.

'ಯಾರು ಇದ್ದರೂ ನನ್ನ ತಾಯವ್ವನ್ಹೋಲರ ಸಾವಿರ ಕೊಳ್ಳಿ ಒಲ್ಯಾಗ ಇದ್ದರ ಜ್ಯೋತಿ ನಿನ್ಯಾರು ಹೋಲ್ವಾರ' ಎಂದು ಜಾನಪದರು ತಾಯಿಯ ಮಹತ್ವವನ್ನು ಹೇಳುವಂತೆ, 'ಸಾವಿರ ಟಿ.ವಿ. ಚಾನಲ್ ಇದ್ದರೂ ಡಿ.ಡಿ. ನ್ಯಾಷನಲ್ ನಿನ್ಯಾರು ಹೋಲ್ವಾರ' ಎಂದು ಡಿ.ಡಿ. ನ್ಯಾಷನಲ್ ಚಾನಲ್‌ಗೆ ಹೇಳಬೇಕು. ಆ ಗಾಂಭೀರ್ಯವೇ ಮೇರು ಮಟ್ಟದ್ದು.

ಆಗಸ್ಟ್ ಬಂದಿತೆಂದರೆ ಸ್ವಾತಂತ್ರ್ಯ ದಿನಾಚರಣೆಯ ಪೂರ್ವಭಾವಿ ಕಾರ್ಯಕ್ರಮಗಳ ಸಂಗಡ ವಿಶೇಷವಾಗಿ ವಿವಿಧತೆಯಲ್ಲಿ ಏಕತೆ ಎನ್ನುವ ಸಂದೇಶ ಹೊತ್ತು ಸಂಯೋಜನೆಗೊಂಡು ಇಡೀ ಭಾರತೀಯತೆಯನ್ನು ಒಂದು ಚೌಕಟ್ಟಿನಲ್ಲಿ ಅಡಕವಾಗಿಸಿ ಪ್ರಸಾರವಾಗುತ್ತಿದ್ದ 'ಮಿಲೇ ಸುರ್ ಮೇರಾ ತುಮ್ಹಾರಾ'ದಂತಹ ಹಾಡುಗಳು ಈ ಎಲ್ಲವಕ್ಕೂ ಕಳಸಪ್ರಾಯದಂತೆ ಇರುತ್ತಿದ್ದವು. 80–90ರ ದಶಕದಲ್ಲಿ ಬಾಲ್ಯ ಕಳೆದ ಪ್ರತಿಯೊಬ್ಬರೂ ದೆಹಲಿ ದೂರದರ್ಶನದ 'ಮಿಲೇ ಸುರ್ ಮೇರಾ ತಮ್ಹಾರಾ' ಸಹಿತ ಇತರ ಹಾಡುಗಳನ್ನು ನೆನಪಿಸಿಕೊಂಡೇ ನೆನಪಿಸಿಕೊಳ್ಳುತ್ತಾರೆ. ಮತ್ತೊಮ್ಮೆ ಮಗದೊಮ್ಮೆ ನೋಡಬೇಕು, ಕೇಳಬೇಕು ಅನ್ನಿಸುವ ಮಾಸ್ಟರ್ ಪೀಸ್‌ಗಳವು.

'ಮಿಲೇ ಸುರ್ ಮೇರಾ ತುಮ್ಹಾರಾ' ಗೀತೆ ಅಶೋಕ ಪಟ್ಕಿಯವರ ಸಂಗೀತ ನಿರ್ದೇಶನದಲ್ಲಿದೆ. ಸ್ವರ ಸಂಯೋಜನೆ ಮಾಡಿರುವ ಭೀಮಸೇನ ಜೋಶಿಯವರೇ ಧ್ವನಿ ಕೂಡ ನೀಡಿದ್ದಾರೆ. ಅವರೊಂದಿಗೆ ಲತಾ ಮಂಗೇಶ್ಕರ್, ಬಾಲಮುರಳಿಕೃಷ್ಣ, ಕವಿತಾ ಕೃಷ್ಣಮೂರ್ತಿ ಮುಂತಾದ ಹಾಡುಗಾರರು ಹಾಡಿರುವ ತಬಲಾ, ಸಿತಾರ್ ವಾದನದೊಂದಿಗೆ ನಿಬದ್ಧವಾಗಿದೆ. ಕ್ರಿಕೆಟಿಗರಾದ ಸುರೇಂದ್ರನಾಥ್, ವೆಂಕಟ್, ಬ್ಯಾಡ್ಮಿಂಟನ್‌ಪಟು ಪ್ರಕಾಶ್ ಪಡುಕೋಣೆ ಮೊದಲಾದ ಕರ್ನಾಟಕದ ಆಟಗಾರರು ತೆರೆದ ಜೀಪಿನಲ್ಲಿ, ಕೊಡಗಿನ ಸಾಂಪ್ರದಾಯಿಕ ಉಡುಪಿನಲ್ಲಿ 'ನನ್ನ ದನಿಗೆ ನಿನ್ನ ದನಿಯ ಸೇರಿದಂತೆ ನಮ್ಮ ಧ್ವನಿಯ' ಎನ್ನುತ್ತಿದ್ದಂತೆ, ನಮ್ಮ ಕನ್ನಡ ಎಷ್ಟು ಇಂಪು ಎಂದು ಅಂದು ಅನ್ನಿಸಿದಂತೆ ಇಂದಿಗೂ ಅನ್ನಿಸುತ್ತದೆ. ಶಬಾನಾ ಅಜ್ಮಿ, ವಹೀದಾ ರೆಹಮಾನ್, ಶರ್ಮಿಳಾ ಟ್ಯಾಗೋರ್, ಹೇಮಾಮಾಲಿನಿ, ಮಲ್ಲಿಕಾ ಸಾರಾಭಾಯಿ ಮುಂತಾದ ನಟಿಯರು ಕಾಣಿಸಿಕೊಳ್ಳುವ ಈ ಹಾಡನ್ನು ಅಂದಿಗೆ ಮತ್ತೊಮ್ಮೆ ನೋಡಬೇಕೆಂದರೂ ಆಗುತ್ತಿರಲಿಲ್ಲ.

'ಮಿಲೇ ಸುರ್ ಮೇರಾ ತುಮ್ಹಾರಾ' ಹಾಡು ಮುಖ್ಯವಾಗಿ ಸಾಂಸ್ಕೃತಿಕ ಏಕತೆಗೆ ಹೇಳಿ ಮಾಡಿಸಿದಂತಹದ್ದು. ಕ್ರೀಡಾ ಕ್ಷೇತ್ರಕ್ಕೆ ಆದ್ಯತೆ ನೀಡಿದ **Spread the freedom light** ಶೀರ್ಷಿಕೆಯ ಹಾಡೂ ಅನನ್ಯವಾದದ್ದು. ಕ್ರೀಡಾಪಟುಗಳು ಕ್ರೀಡಾಜ್ಯೋತಿ ಹಿಡಿದು ಮಳೆಯಲ್ಲಿ ಬೆಟ್ಟಗುಡ್ಡಗಳನ್ನು ದಾಟಿ ಗಮ್ಯವನ್ನು ತಲುಪುವ ಹಿನ್ನೆಲೆ ಸಂಗೀತವುಳ್ಳ ವಿಡಿಯೊ ಎಲ್ಲ ಕ್ಷೇತ್ರದ ಕ್ರೀಡಾಪಟುಗಳನ್ನು ಒಮ್ಮೆಗೇ ನೋಡುವ ಅವಕಾಶ ಕೊಡುತ್ತಿತ್ತು.

'ಸೌರ್ ಮಂಡಲ್ ಮೆ ಟಿಮ್ ಟಿಮ್ ಕರತೇ ತಾರೆ ಅನೇಕ್ ಹೈ' ಹಾಡೂ ಸರ್ವಧರ್ಮ ಸಮನ್ವಯವನ್ನು ಸಾರುವ ಗ್ರಾಮೀಣ ಸೊಗಡನ್ನು ಸೇರಿಸಿಕೊಂಡು

